# ಫುಟ್‌ಬಾಲ್‌ನ ಮಿನುಗು ತಾರೆ

■ ಪ್ರವೀಣ ಕುಲಕರ್ಣಿ




ಜಗತ್ತಿನಾದ್ಯಂತ ಈಗ ಮಹಿಳಾ ಫುಟ್‌ಬಾಲ್ ಜ್ವರ. ಫುಟ್‌ಬಾಲ್ ಅಂಗಳದಲ್ಲಿ ಹೊಳೆಯುತ್ತಿರುವ ತಾರೆಗಳ ಸಂಖ್ಯೆ ದಿನದಿಂದ ದಿನಕ್ಕೆ ಏರುತ್ತಲೇ ಇದೆ. ಕ್ರಿಸ್ಟಿನ್ ಸಿಂಕ್ಲೇರ್, ಮೇಗಾನ್ ರ್‍ಯಾಪಿನೋವ್, ಸರಿನಾ ಬೋಲ್ಡನ್... ಹೀಗೆ ಫುಟ್‌ಬಾಲ್ ಅಂಗಳದಲ್ಲಿ ಮಿಂಚುತ್ತಿರುವ ಆಟಗಾರ್ತಿಯರ ದೊಡ್ಡ ಪಟ್ಟಿಯೇ ಇದೆ. ಅಂದಹಾಗೆ, ಈ ಮೂವರೂ ಆಟಗಾರ್ತಿಯರು ಅಮೆರಿಕದ ಕಾಲೇಜು ಅಂಗಳದಲ್ಲಿ ಬೆಳೆದವರು. ತಮ್ಮ ಕೌಶಲಕ್ಕೆ ಅಲ್ಲಿಯೇ ಸಾಣೆ ಹಿಡಿದವರು.

ಫಿಫಾ ಮಹಿಳಾ ವಿಶ್ವಕಪ್ ಟೂರ್ನಿಯಲ್ಲಿ ಎಲ್ಲ ತಂಡಗಳಿಂದ ಸೇರಿ 736 ಆಟಗಾರ್ತಿಯರು ಪಾಲ್ಗೊಂಡಿದ್ದಾರೆ. ಅದರಲ್ಲಿ 137 ಜನ ಫುಟ್‌ಬಾಲ್ ಆಟಗಾರ್ತಿಯರಾಗಿ ರೂಪುಗೊಂಡಿದ್ದು ಅಮೆರಿಕದಲ್ಲೇ ಎನ್ನುವುದು ನಿಮಗೆ ಗೊತ್ತೆ? ಗುಂಪು ಹಂತದ ಪಂದ್ಯಗಳಲ್ಲಿ ಒಟ್ಟಾರೆ 32 ತಂಡಗಳು ಪಾಲ್ಗೊಂಡಿದ್ದು, ಪ್ರತೀ ಆರು ಆಟಗಾರ್ತಿಯರಲ್ಲಿ ಒಬ್ಬರು ಅಮೆರಿಕದಲ್ಲಿ ಬೆಳೆದವರೇ ಆಗಿದ್ದಾರೆ.

ಕ್ರಿಸ್ಟಿನ್ ಸಿಂಕ್ಲೇರ್ ಕೆನಡಾ ತಂಡದ ನಾಯಕಿ. ಒಲಿಂಪಿಕ್ಸ್ ಕೂಟದಲ್ಲಿ ಒಂದು ಬಾರಿ ಚಿನ್ನ ಮತ್ತು ಎರಡು ಬಾರಿ ಕಂಚಿನ ಪದಕ ಜಯಿಸಿದ ಸದಸ್ಯೆಯಾದವರು. ಹದಿನಾಲ್ಕು ಬಾರಿ 'ಫುಟ್‌ಬಾಲ್‌ನ ರಾಷ್ಟ್ರೀಯ ಆಟಗಾರ್ತಿ' ಗೌರವಕ್ಕೂ ಪಾತ್ರರಾದವರು. ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಅತ್ಯಧಿಕ ಗೋಲುಗಳನ್ನು ಗಳಿಸಿದ ಹಿರಿಮೆಯೂ ಇವರದಾಗಿದೆ. ಅವರು ಇಂತಹ ಪಂದ್ಯಗಳಲ್ಲಿ 190 ಗೋಲುಗಳನ್ನು ಗಳಿಸಿದ್ದು, ಇಂತಹ ಸಾಧನೆ ಪುರುಷ ವಿಭಾಗದಲ್ಲೂ ಬೇರೆ ಯಾವ ಆಟಗಾರನಿಂದಲೂ ಸಾಧ್ಯವಾಗಿಲ್ಲ ಎಂದರೆ ಸಿಂಕ್ಲೇರ್ ಅವರ ಆಟದ ಹಿರಿಮೆ ಅರಿವಿಗೆ ಬಂದೀತು. ಆರು ವಿಶ್ವಕಪ್, ನಾಲ್ಕು ಒಲಿಂಪಿಕ್ ಕೂಟದ ಟೂರ್ನಿಗಳಲ್ಲಿ ಆಡಿದ ದಾಖಲೆಯೂ ಅವರದಾಗಿದೆ. ಜಗತ್ತಿನ ಸಾರ್ವಕಾಲಿಕ ಶ್ರೇಷ್ಠ ಫುಟ್‌ಬಾಲ್ ಪಟುಗಳಲ್ಲಿ ಇವರೂ ಒಬ್ಬರಾಗಿದ್ದಾರೆ.

ಫಿಫಾದಿಂದ ಏಳು ಬಾರಿ ವರ್ಷದ ಆಟಗಾರ್ತಿ ಎಂಬ ಗೌರವಕ್ಕೆ ಭಾಜನರಾಗಿರುವ ಸಿಂಕ್ಲೇರ್, ಫಾರ್ವರ್ಡ್‌ನಲ್ಲಿದ್ದು ತಂಡದ ದಾಳಿಯ ನೇತೃತ್ವವನ್ನು ವಹಿಸುವರು. ಫ್ರೀ ಕಿಕ್ ಮತ್ತು ಪೆನಾಲ್ಟಿಗಳಲ್ಲಿ ಅವರ ಗೋಲು ಗಳಿಕೆಯ ಯಶಸ್ಸು ದೊಡ್ಡದಿದೆ. ಚೆಂಡು ಅವರ ಕಾಲ ಬಳಿಗೆ ಬಂದಿದೆ ಎಂದಾದರೆ ಗೋಲು ಪೆಟ್ಟಿಗೆಗೆ ಹೋಗುವುದು ನಿಶ್ಚಿತ ಎನ್ನುವಷ್ಟು ಅವರ ತಂಡದ ಸದಸ್ಯೆಯರಿಗೆ ಅವರ ಮೇಲೆ ಅಪಾರ ವಿಶ್ವಾಸ. ಬ್ರಿಟಿಷ್ ಕೊಲಂಬಿಯಾದ ಬರ್ನಾಬಿಯಲ್ಲಿ ಜನಿಸಿದ ಸಿಂಕ್ಲೇರ್, ಏಳನೇ ವಯಸ್ಸಿನಲ್ಲಿಯೇ ಫುಟ್‌ಬಾಲ್ ಗೀಳು ಅಂಟಿಸಿಕೊಂಡವರು. ಅವರ ತಂದೆ ಹಾಗೂ ಚಿಕ್ಕಪ್ಪ ಇಬ್ಬರೂ ಫುಟ್‌ಬಾಲ್ ಆಟಗಾರರಾಗಿದ್ದುದು, ಈ ಹುಡುಗಿಗೂ ಚೆಂಡಿನ ಮೋಹ ಆವರಿಸಲು ಕಾರಣ. ಶಾಲಾ ದಿನಗಳಲ್ಲಿ ಈ ಹುಡುಗಿ ಬೇಸ್‌ಬಾಲ್ ಹಾಗೂ ಬ್ಯಾಸ್ಕೆಟ್‌ಬಾಲ್ ಆಟದಲ್ಲೂ ತೊಡಗಿಕೊಂಡಿದ್ದು ಉಂಟು.

ಶಾಲಾ ಹಾಗೂ ಕ್ಲಬ್ ತಂಡಗಳಿಗೆ ಆಡಿದ ಸಿಂಕ್ಲೇರ್ ಮುಂದೆ ಕೆನಡಾದ ರಾಷ್ಟ್ರೀಯ ತಂಡಕ್ಕೂ ಆಯ್ಕೆಯಾದರು. ಅಲ್ಲಿಂದ ಅವರು ಹಿಂದಿರುಗಿ ನೋಡಿದ್ದೇ ಇಲ್ಲ. ಫುಟ್‌ಬಾಲ್ ಜತೆಗಿನ ಸುದೀರ್ಘ ಯಾನದಲ್ಲಿ ಹಲವು ದಾಖಲೆಗಳನ್ನು ಪುಡಿ ಮಾಡಿದ ಅವರು, ಹೊಸ ಹೊಸ ವಿಕ್ರಮಗಳನ್ನು ಸಾಧಿಸುತ್ತಲೇ ಹೋದರು. ಆಟಕ್ಕೆ ನಿಂತರೆ ಸೇನಾನಿಯಂತೆ ಹೋರಾಡುವ ಸಿಂಕ್ಲೇರ್, ವೈಯಕ್ತಿಕ ವಿಷಯಕ್ಕೆ ಬಂದರೆ ಮುಟ್ಟಿದರೆ ಮುನಿ ಸಸ್ಯದ ಎಲೆಗಳಂತೆ ಮುದುಡಿ ಬಿಡುವರು. ಸ್ಕ್ಲೆರೋಸಿಸ್ ಎಂಬ ಕಾಯಿಲೆಯಿಂದ ಅವರ ಅಮ್ಮ ದುರಂತ ಸಾವನ್ನಪ್ಪಬೇಕಾಯಿತು. ಅದು ಸಿಂಕ್ಲೇರ್ ಮೇಲೆ ತುಂಬಾ ಪರಿಣಾಮ ಬೀರಿತು. ತಾಯಿಯ ನೆನಪಿನಲ್ಲಿ ದೊಡ್ಡ ನಿಧಿಯನ್ನೇ ಸ್ಥಾಪಿಸಿದ ಈ ಆಟಗಾರ್ತಿ, ಅಂತಹ ಕಾಯಿಲೆಯಿಂದ ಬಳಲುತ್ತಿರುವವರ ನೆರವಿಗೆ ನಿಂತಿದ್ದಾರೆ. ಅಮ್ಮನ ನೆನಪಿನಲ್ಲಿ 'ಲಾಂಗ್ ಗೇಮ್: ಎ ಮೆಮೊರ್' ಎಂಬ ನಾಟಕವನ್ನೂ ಅವರು ಬರೆದಿದ್ದಾರೆ. ಹೀಗೆ ಕ್ರೀಡೆಯ ಅಂಗಳದಲ್ಲಿ ಮಾತ್ರವಲ್ಲದೆ ಸಮಾಜ ಸೇವೆ ಮತ್ತು ಸಾಹಿತ್ಯ ವಲಯದಲ್ಲೂ ಅವರು ಕ್ರಿಯಾಶೀಲರು. ಹಲವು ವಿಶ್ವವಿದ್ಯಾಲಯಗಳು ಅವರಿಗೆ ಗೌರವ ಪದವಿಯನ್ನೂ ನೀಡಿವೆ. ಕೆನಡಾದ ಅಂಚೆ ಇಲಾಖೆ ಅವರ ಗೌರವಾರ್ಥವಾಗಿ ಅಂಚೆ ಚೀಟಿಯನ್ನೂ ಹೊರತಂದಿದೆ.

'ದೇಶದ ಪರವಾಗಿ ಆಡುವುದು ನನ್ನ ಪಾಲಿಗೆ ಹೆಮ್ಮೆಯ ವಿಷಯ. ಆ ಕೆಲಸವನ್ನು ನಾನು ನಿಷ್ಠೆಯಿಂದ ಮಾಡಿದ್ದೇನೆ. ಈ ಸುದೀರ್ಘ ಪಯಣದಲ್ಲಿ ಹಲವೂ ಪದಕಗಳನ್ನು ಗೆಲ್ಲುವುದು ಸಾಧ್ಯವಾಗಿದೆ. ಅದೆಲ್ಲ ಸರಿ. ಆದರೆ, ದೇಶದ ಉನ್ನತ ಗೌರವಗಳು, ಪದವಿಗಳು ದಕ್ಕಿದ್ದಕ್ಕೆ ನನ್ನ ಮನಸ್ಸು ತುಂಬಿಬಂದಿದೆ. ಏನು ಹೇಳುವುದು ತೋಚದಾಗಿದೆ' ಎಂದು ವಿನಮ್ರವಾಗಿ ಹೇಳುತ್ತಾರೆ ಸಿಂಕ್ಲೇರ್. ಪಂದ್ಯದ ದಿಕ್ಕನ್ನೇ ಬದಲಿಸಬಲ್ಲ ಆಟಗಾರ್ತಿ ಎಂಬ ಹಿರಿಮೆಗೂ ಪಾತ್ರವಾಗಿರುವ ಅವರು, ನಾಯಕಿಯಾಗಿಯೂ ದೊಡ್ಡ ಯಶಸ್ಸನ್ನು ಕಂಡವರು. ಸಿನಿಮಾ ಹಾಗೂ ಟಿ.ವಿ ಶೋಗಳಲ್ಲೂ ಕಾಣಿಸಿಕೊಂಡಿರುವ ಅವರು, ಮ್ಯಾಗಜಿನ್‌ಗಳ ಪಾಲಿಗೂ ಹೆಮ್ಮೆಯ ರೂಪದರ್ಶಿಯಾಗಿದ್ದಾರೆ. ಮತ್ತೊಂದು ಕ್ರೀಡಾ ಜಾತ್ರೆಯಲ್ಲಿ ತಂಡವನ್ನು ಮುನ್ನಡೆಸಲು ಹೊರಟಿರುವ ಅವರಿಗೊಂದು ಬೆಸ್ಟ್ ಆಫ್ ಲಕ್. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65